# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 600
2. ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭಾ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 11.03.2025
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಏರ್ ಷೋ ಟಿಕೇಟ್ ಮೂಲಸೌಲಭ್ಯ ಇಲಾಖೆಯಿಂದ ಯಾವ ಯಾವ ಇಲಾಖೆಗೆ ಎಷ್ಟು ಟಿಕೇಟ್ ಬಿಡುಗಡೆ ಮಾಡಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಏರೋ ಇಂಡಿಯಾ ಕಾರ್ಯಕ್ರಮವು ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾಯಲದ ಮುಖಾಂತರ ನಡೆಸುವ ಒಂದು ಕಾರ್ಯಕ್ರಮವಾಗಿದ್ದು, ರಾಜ್ಯ ಸರ್ಕಾರದ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ಸಮನ್ವಯ ಇಲಾಖೆಯಾಗಿರುತ್ತದೆ. ರಕ್ಷಣಾ ಮಂತ್ರಾಯವು ಏರೋ ಇಂಡಿಯಾ 2025ರ ಕಾರ್ಯಕ್ರಮದ ಟಿಕೇಟ್‌ಗಳನ್ನು ನೀಡಿದ್ದು, ಶಿಷ್ಟಾಚಾರದ ಪ್ರಕಾರ ಎಲ್ಲಾ ಗಣ್ಯರಿಗೆ, ಇಲಾಖಾ ಮುಖ್ಯಸ್ಥರಿಗೆ ಹಾಗೂ ಅವಶ್ಯಕತೆಗನುಗುಣವಾಗಿ ಏರೋ ಇಂಡಿಯಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲಾ ಇಲಾಖೆಗಳಿಗೆ ಟಿಕೇಟ್‌ಗಳನ್ನು ನೀಡಲಾಗಿರುತ್ತದೆ. |
| (ಆ) | ರಾಜ್ಯದಲ್ಲಿ ಪ್ರತಿ ಶಾಸಕರು ಅಥವಾ ಸಚಿವರಿಗೆ ಬಿಡುಗಡೆಯಾದ ಪಾಸ್ ಎಷ್ಟು; | ರಾಜ್ಯ ಸರ್ಕಾರದ ಎಲ್ಲಾ ಮಾನ್ಯ ಸಚಿವರುಗಳಿಗೆ 6 ಪಾಸ್‌ಗಳನ್ನು, ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ 4 ಹಾಗೂ ಮಾನ್ಯ ವಿಧಾನ ಸಭಾ ಸದಸ್ಯರಿಗೆ 4 ಪಾಸ್‌ಗಳನ್ನು ನೀಡಲಾಗಿರುತ್ತದೆ. |
| (ಇ) | ಶಾಸಕರು ಪತ್ರದ ಮೂಲಕ ಅವರ ಕುಟುಂಬ ಅಥವಾ ಕ್ಷೇತ್ರದ ಜನತೆ ವೀಕ್ಷಿಸಲು ಹೆಚ್ಚುವರಿ ಪಾಸ್ ಕೇಳಿದ್ದರೂ ನೀಡದಿರಲು ಕಾರಣವೇನು; ನೀಡದಿದ್ದಲ್ಲಿ ಶಾಸಕರ ಪತ್ರದಲ್ಲಿ ಆಧಾರ್ ಸಂಖ್ಯೆ ಪಡೆದು ನೀಡದಿರಲು ಕಾರಣವೇನು; (ಸಂಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದಿಂದ ಸ್ವೀಕೃತವಾದ ಪಾಸ್‌ಗಳನ್ನು ವಿತರಿಸಲಾಗಿದ್ದು, ಯಾವುದೇ ಹೆಚ್ಚುವರಿ ಪಾಸ್‌ಗಳು ಇಲಾಖೆಯಲ್ಲಿ ಸ್ವೀಕೃತವಾಗದ ಕಾರಣ ಮಾನ್ಯ ಶಾಸಕರುಗಳ ಕೋರಿಕೆಯ ಹೆಚ್ಚುವರಿ ಪಾಸ್‌ಗಳನ್ನು ನೀಡಲು ಸಾಧ್ಯವಾಗಿರುವುದಿಲ್ಲ. |
| (ಈ) | ಅವಶ್ಯಕತೆ ಇದೆ ಎಂದು ಪತ್ರ ರವಾನಿಸಿದ ಮೇಲೆ ಪಾಸ್ ನೀಡುವ ಸೌಲಭ್ಯ ಇಲಾಖೆಗೆ ಸೇರಿದೆಯೇ; | |
| (ಉ) | ಯಲಹಂಕದಲ್ಲಿ ಏರ್ ಶೋ ನಡೆಯುವ ಸಮಯದಲ್ಲಿ ಮೂಲಸೌಲಭ್ಯ ಅಧಿಕಾರಿಗಳು ವಿಐಪಿ ಪಾಸ್ ಇದ್ದರು ಸಹ ಅಧಿಕಾರಿಗಳು ಮೂಲಸೌಲಭ್ಯ ಕ್ಯಾಬಿನ್ ಒಳಗೆ ಬಿಡದಿರಲು ಕಾರಣವೇನು ಅದಕ್ಕೆ ಸರ್ಕಾರದಿಂದ ಯಾವ ನಿಯಮ ಮಾಡಲಾಗಿತ್ತು; ಕ್ಯಾಬಿನ್ ಒಳಗಡೆ ಶಾಸಕರ ಕುಟುಂಬದವರಿಗೆ ಅನುಮತಿ ಇದೆಯೇ? (ಸಂಪೂರ್ಣ ವಿವರ ನೀಡುವುದು) | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವತಿಯಿಂದ ಏರೋ ಇಂಡಿಯಾ 2025ರ ಕಾರ್ಯಕ್ರಮದಲ್ಲಿ ಭಾಗವಹಿಸುವ ಗಣ್ಯರುಗಳ ಅನುಕೂಲಕ್ಕಾಗಿ ಎರಡು ಪ್ರತ್ಯೇಕ Sitting Lounge (Canopy)ಗಳನ್ನು ವ್ಯವಸ್ಥೆ ಮಾಡಲಾಗಿರುತ್ತದೆ. ಈ ಸಮಯದಲ್ಲಿ ಆಗಮಿಸಿದ ಗಣ್ಯರಿಗೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಇಲಾಖೆಯ ವತಿಯಿಂದ ಏರ್ಪಡಿಸಿರುವ ಕ್ಯಾಬಿನ್ ಒಳಗಡೆ ಮಾನ್ಯ ಶಾಸಕರ ಕಛೇರಿಗಳಿಗೆ ನೀಡಿರುವ ಪಾಸ್‌ಗಳನ್ನು ಹೊಂದಿರುವವರಿಗೆ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ ಹಾಗೂ ಅನುಮತಿಯನ್ನು ನೀಡಲಾಗಿದೆ. |

ಸಂಖ್ಯೆ: ಮೂಅಇ 43 ರಾಅವಿ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು